**ಮೇ: ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯ, ಮುಧೋಳ**

C.C.No. 1283/2021.
CW2/PW3.

| | |
|---|---|
| ಹೆಸರು | ದುಂಡಪ್ಪ ನೇಗಿಲಾಳ |
| ತಂದೆಯ ಹೆಸರು | ಬಾಲಪ್ಪ |
| ವಯಸ್ಸು | 43 ವರ್ಷ |
| ಉದ್ಯೋಗ | ಚಾಲಕ |
| ವಾಸಸ್ಥಳ | ನಾಗನಾಪುರ ಗ್ರಾಮ. |

**ದಿನಾಂಕ: 16-06-2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಎ.ಪಿ.ಪಿ ರವರಿಂದ.**

2021 ನೇ ಸಾಲಿನಲ್ಲಿ ನಾಗನಾಪುರ ಗ್ರಾಮದ ನಿಂಗಾಪುರ ಇವರ ಮನೆಯ ಮುಂದೆ ಜಗಳವಾದ ವಿಷಯವಾಗಿ ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಪೋಲಿಸರು ಪಂಚನಾಮೆ ಮಾಡಿ ನಮ್ಮ ಸಹಿಗಳನ್ನು ಮತ್ತು ಭಾವಚಿತ್ರಗಳನ್ನು ತೆಗೆದುಕೊಂಡಿರುತ್ತಾರೆ. ಈಗ ಸಾಕ್ಷಿಯು ನಿಪಿ-2 ಗುನ್ಹೆ ಸ್ಥಳ ಪಂಚನಾಮೆ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗ ನಿಪಿ-2(ಬಿ) ಎಂದು ಗುರುತಿಸಲಾಯಿತು. ನಿಪಿ-3 ರಿಂದ 5 ಭಾವಚಿತ್ರಗಳನ್ನು ಸದರಿ ಪಂಚನಾಮೆ ಕಾಲಕ್ಕೆ ಪೋಲಿಸರು ತೆಗೆದುಕೊಂಡು ಎರಡು ಕಲ್ಲುಗಳನ್ನು ಜಪ್ತಿ ಮಾಡಿಕೊಂಡಿರುತ್ತಾರೆ. ಸಾಕ್ಷಿಯು ಈಗ ಮು.ಮಾ-1 ಮತ್ತು 2 ಕಲ್ಲುಗಳನ್ನು ನೋಡಿ ಸದರಿ ಕಲ್ಲುಗಳನ್ನು ಪೋಲಿಸರು ಪಂಚನಾಮೆ ಕಾಲಕ್ಕೆ ತೆಗೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

**ಪಾಟಿ ಸವಾಲು:- ಆರೋಪಿತರ ಪರ ಶ್ರೀ ಬಿ.ಸಿ.ಎಚ್ ವಕೀಲರಿಂದ.**

ಮು.ಮಾ-1 ಮತ್ತು 2 ಕಲ್ಲುಗಳನ್ನು ಪೋಲಿಸರು ಯಾವ ವಿಷಯವಾಗಿ ತೆಗೆದುಕೊಂಡು ಹೋದರು ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ನಿಪಿ-2 ಪಂಚನಾಮೆಯಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಪೋಲಿಸರು ಸಹಿ ಮಾಡು ಅಂದ ಮೇರೆಗೆ ನಾನು ನಿಪಿ-2 ಪಂಚನಾಮೆ ಮೇಲೆ ಸಹಿ ಮಾಡಿರುತ್ತೇನೆ ಮತ್ತು ಅದರಲ್ಲಿ ಬರೆದಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ ಮುಧೋಳ.

ಸಾಕ್ಷಿಯ ಸಹಿ

LAGAMA SHIVANAPPA HUKKERI

Digitally signed by LAGAMA SHIVANAPPA HUKKERI
Date: 2026.07.07 10:56:24 +0530